**ಪ್ರತಿಷ್ಟಿತ ಉದ್ದಿಮೆದಾರರಿಗೆ ಸಾಲದ ಯೋಜನೆ :**

ಈಗಾಗಲೇ ಅಸ್ಥಿತ್ವದಲ್ಲಿರುವ ಹಾಗೂ ಸಂಸ್ಥೆಯಿಂದ ಕನಿಷ್ಟ 10.00 ಲಕ್ಷ ರೂ.ಗಳ ಸಾಲವನ್ನು ಪಡೆದಿರುವ ಹಾಗೂ ಕಳೆದ ಮೂರು ವರ್ಷಗಳಲ್ಲಿ ಉತ್ತಮ ದಾಖಲೆಯನ್ನು ಹೊಂದಿರುವ ಉತ್ತಮ ಪ್ರವರ್ಗ ಘಟಕಗಳಿಗೆ ಕನಿಷ್ಟ ರೂ.5.00 ಲಕ್ಷ ಹಾಗೂ ಗರಿಷ್ಟ ರೂ.200 ಲಕ್ಷದವರೆಗೆ ಸಾಲದ ನೆರವು ದೊರೆಯುತ್ತದೆ. ಘಟಕಗಳ ಅಲ್ಪಾವಧಿ ಹಣದ ಅವಶ್ಯಕತೆಗಳನ್ನು ಪೂರೈಸಲು ಈ ಯೋಜನೆ ಯಡಿಯಲ್ಲಿ ಸಾಲವು ಲಭ್ಯವಿರುತ್ತದೆ. ಈ ಯೋಜನೆಯಡಿಯಲ್ಲಿ ಪಡೆದ ಸಾಲವನ್ನು 24 ತಿಂಗಳುಗಳಲ್ಲಿ (ವಿರಾಮಾವಧಿಯ 6 ತಿಂಗಳುಗಳನ್ನು ಒಳಗೊಂಡಂತೆ) ಮರುಪಾವತಿಸ ಬೇಕಾಗಿರುತ್ತದೆ.